ಜೊತೆಗೆ ದೊಡ್ಡಮ್ಮನ ಸರ್ಪಗಾವಲು ಇದ್ದೇ ಇತ್ತಲ್ಲ? ಉಣುಗೋಲಿನೊಳಗಿದ್ದರೂ ಮನೆಯ ಆವರಣದ ಹೊರಗಿದ್ದವನೊಡನೆ ಕಾವೇರಿಯ ಸಂಪರ್ಕ ಬರುತ್ತಿದ್ದುದು ಇಲ್ಲವೇ ಇಲ್ಲ ಎನ್ನುವಷ್ಟು ಕಮ್ಮಿ. ಅವನಷ್ಟಕ್ಕೆ ಅವನು, ಇವಳಷ್ಟಕ್ಕೆ ಇವಳು.

ಬೆಳಗಿನ ಹೊತ್ತು ದೊಡ್ಡ ಹಿತ್ತಾಳೆ ಹರಿವಾಣ ಹಿಡಿದುಕೊಂಡು ದೇವರಪೂಜೆಗೆ ಹೂ ಕುಯ್ಯುವಾಗ, ಚೌತಿಯ ದಿನ ಲೆಕ್ಕ ತಪ್ಪದಂತೆ ಎಣಿಸುತ್ತಾ ನೂರೊಂದು ದೂರ್ವೆ ಕಿತ್ತು ಕಟ್ಟು ಮಾಡುವಾಗ, ಮನೆಯ ಬಲಭಾಗದಲ್ಲಿ ಹೊರಹೊರಗಿದ್ದ ಪಣತದ ಕೊಟ್ಟಿಗೆಯ ಕಡೆಯಿಂದ ಬೀಸಿ ಬರುವ ಗಾಳಿಯಲ್ಲಿ ಮಸಾಲೆಯ ಘಮಲು ಲಘುವಾಗಿ ಮೂಗು ಸೋಕಿ, 'ನಳಪಾಕ ತಯಾರಾಗ್ತಿದೆ. ಪುಣ್ಯಾತ್ಮ ಅದೇನು ಅಡಿಗೆ ಮಾಡ್ಕೋತಾನೋ...' ಎಂದುಕೊಳ್ಳುತ್ತಾ ತುಟಿಗಳೆಡೆಯಲ್ಲಿ ಅರಳುತ್ತಿತ್ತು ಮೃದುಹಾಸ. ಬೆಳಗಿನ ಹೊತ್ತು ಎಲ್ಲರೂ ಏಳುವುದರೊಳಗೆ ಎದ್ದು ಅವನು ಹಿತ್ತಲಿನ ಒಗದೆಯಲ್ಲಿ ಮಸಿಪಾತ್ರೆ ತಿಕ್ಕಿ ಶುಚಿ ಮಾಡಿಕೊಳ್ಳುವುದರ ಕುರಿತು, ಬಟ್ಟೆಬರೆ ಒಗೆಕೊಳ್ಳುವುದರ ಕುರಿತು, ಅಮ್ಮ ಆಗೀಗ ಮೆಚ್ಚುಗೆಯ ಮಾತಾಡುವಷ್ಟು ಮೆದುತನ ಬೆಳೆಸಿಕೊಂಡಿದ್ದಳು. "ಅವನಾಯ್ತು, ಅವನ ಉದ್ಯೋಗ ಆಯ್ತು. ಯಾರ ತಂಟೆಗೂ ಬರಲ್ಲ. ಒಳ್ಳೇ ಹುಡುಗ" ಪುಗಸಟ್ಟೆ ಒಂದು ಶಿಫಾರಸು.

ದೊಡ್ಡಣ್ಣ ಬಿ.ಎಸ್ಸಿ. ಮುಗಿಸಿ ಮೈಸೂರಿನಲ್ಲಿ ಎಂ.ಎಸ್ಸಿ.ಗೆ ಸೇರಿಕೊಂಡಿದ್ದ. ಸಣ್ಣಣ್ಣ ನಾಗೇಶ ಎಸ್ಸೆಸ್ಸೆಲ್ಸಿ ಫೇಲಾಗಿ ಮನೆಗೆ ಕಚ್ಚಿಕೊಂಡಿದ್ದ. ಅವನು ಪರೀಕ್ಷೆಯಲ್ಲಿ ಫೇಲಾಗಿದ್ದೆಂಬುದು ಅಪ್ಪನಿಗೆ ಹಾಲು, ಸಕ್ಕರೆ ಬೆರೆಸಿ ಕುಡಿದಷ್ಟು ಹಿತವಾಗಿತ್ತು. ಎಲ್ಲಿ ಇವನೂ ದೊಡ್ಡವನ ಹಾಗೆ ಕೈ ಕೊಟ್ಟು ಪೇಟೆ ಹತ್ತುತ್ತಾನೋ ಅಂದುಕೊಂಡಿದ್ದವನಿಗೆ ನಾಗೇಶಣ್ಣ ಮುಖ ಚಪ್ಪೆ ಮಾಡಿಕೊಂಡು ಮನೆಗೆ ಬಂದು, "ಎಷ್ಟು ಚೆನ್ನಾಗಿ ಬರ್ದಿದ್ದೆ ನಾನು. ಆದ್ರೂ ಫೇಲ್ ಮಾಡಿದಾರೆ" ಎನ್ನುತ್ತಾ ಮಂಡಿಯಲ್ಲಿ ಮುಖ ಹುದುಗಿಸಿಕೊಂಡಾಗ ಅಪ್ಪ ಸಂತೋಷಾಧಿಕ್ಯದಿಂದ, "ಏ ಇವಳೇ, ನಿನ್ನ ಮಗ ಫೇಲಂತೆ ಕಣೇ. ಭರ್ತಿ ದ್ರಾಕ್ಷಿ, ಗೇರುಬೀಜ ಹಾಕಿ ಕೇಸರೀಬಾತು ಮಾಡು. ಎಲ್ರೂ ಬಾಯಿ ಸಿಹಿ ಮಾಡ್ಕಳಾಣ..." ಎಂದಿದ್ದು ಇವತ್ತಿಗೂ ಕಾವೇರಿಯ ಕಿವಿಗಳಲ್ಲಿ ಅನುರಣಿಸುವಂತಿದೆ. ಜೊತೆಗೆ ಮನದೊಳಗೆ ಅಚ್ಚೊತ್ತಿದೆ ಚಕಿತನಾಗಿ ತಲೆಯೆತ್ತಿ ನೀರ್ದುಂಬಿದ ಕಣ್ಣುಗಳಿಂದ ಅಪ್ಪನ ಮುಖ ನಿರುಕಿಸಿದ ಅಣ್ಣನ ಮುಖವೂ. 'ಅಪ್ಪ ಚಾಳಿಸ್ತಿದಾನೆ' ಅಂದುಕೊಂಡಿದ್ದನಂತೆ ಅಣ್ಣ. ಆದರೆ ವಾಸ್ತವವಾಗಿಯೂ ಅವತ್ತು ತುಪ್ಪ ತೇಲುವಂತಿದ್ದ ಘಮಘಮ ಕೇಸರೀಬಾತು ಮನೆಯಲ್ಲಿ ತಯಾರಾಗಿ ಹಬ್ಬದ ವಾತಾವರಣ. ಇನ್ನು ಅಪ್ಪನ ಪ್ರಿಯಪುತ್ರಿ ಕಾವೇರಿ ಎಸ್ಸೆಸ್ಸೆಲ್ಸಿಯಲ್ಲಿ ಜೀವನಾಂಶ ತೆಗೆದುಕೊಂಡು ಪಾಸಾಗಿದ್ದರೂ ಮುಂದೆ ಪೇಟೆಗೆ ಕಳಿಸಿ ಅವಳನ್ನು ಓದಿಸಬೇಕೆಂಬ ಇಚ್ಛೆ ಯಾರಿಗೂ ಇರಲಿಲ್ಲ. ಸ್ವತಾ ಕಾವೇರಿಗೂ. ಅಮ್ಮನ ಹಿಂದೆಮುಂದೆ ಓಡಾಡಿಕೊಂಡು, ಅಷ್ಟಿಷ್ಟು ಮನೆಗೆಲಸದಲ್ಲಿ ಸಹಾಯ ಮಾಡಿಕೊಂಡು, 'ಹೆಣ್ಣುಮಕ್ಕಳು ಅಂದರೆ ಹೀಗಿರ್ಬೇಕು' ಎನ್ನುವ ದೊಡ್ಡಮ್ಮನ ಹಿತೋಪದೇಶಗಳಿಗೆ ಕಿವಿಗೊಟ್ಟು ಆಕಳಿಕೆ ನುಂಗಿಕೊಂಡು, ಹೀಗೇ ಕಾಲ ಕಳೆದು ಹೋಗಿದ್ದರೆ ಒಂದೆರಡು ವರ್ಷ ಅನ್ನುವುದರಲ್ಲಿ ಅವಳ ಅಪ್ಪ ತಮ್ಮ ಯೋಗ್ಯತೆಗೆ ತಕ್ಕಂತಾ ಗಂಡು ಹುಡುಕಿ ಧಾಂಧೂಂ ಎಂದು ಅವಳ ಮದುವೆ ಹುಡಿ ಹಾರಿಸುತ್ತಿದ್ದುದರಲ್ಲಿ ಸಂಶಯವೇನಿರಲಿಲ್ಲ. 'ಹದಿನೆಂಟು ತುಂಬಲಿ. ಇನ್ನೂ ಸಣ್ಣದು. ಆಮೇಲೆ ಜಾತಕ ಹೊರಡಿಸಿದರೆ ಸರಿ' ಎಂದು ಅಪ್ಪಅಮ್ಮ ಮಾತಾಡಿಕೊಂಡಿದ್ದು ಕೇಳಿ ಹರೆಯದ ಪೋರಿ ಪುಳಕಿತಳಾಗಿದ್ದಳು. ಯಾರೋ ಅವನು? ಹೇಗಿದ್ದಾನೋ? ಎಲ್ಲಿದ್ದಾನೋ? ಇದ್ದಾನೆ ಅನ್ನುವುದಂತೂ ತಾನು ಇರುವಷ್ಟೇ ಸತ್ಯ.